## ರಾಜ್ಯದಲ್ಲಿ ಉಚಿತ ಕಾನೂನು ನೆರವು

೧೮೮೮ ಶ್ರೀ ಜಿ. ರಾಜೂಗೌಡ (ಹತ್ತೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆವಿಗೆ ಉಚಿತ ಕಾನೂನು ನೆರವು ಕೋರಿ ಎಷ್ಟು ಅರ್ಜಿಗಳು ಬಂದಿವೆ,

ಆ) ಈ ಪೈಕಿ ಎಷ್ಟು ಅರ್ಜಿದಾರರಿಗೆ ಉಚಿತ ಕಾನೂನು ನೆರವು ಸಿಕ್ಕಿದೆ,

ಇ) ಎಷ್ಟು ಮೊಕದ್ದಮೆಗಳಲ್ಲಿ ಉಚಿತ ಕಾನೂನು ನೆರವಿನಿಂದ ಇವರಿಗೆ ಕೇಸಿನ ತೀರ್ಪು ಅನುಕೂಲವಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಹಾಗೂ ಕಾನೂನು ಮಂತ್ರಿಗಳು).—

ಅ) ೧೬,೦೬೦

ಆ) ೯,೨೭೩

ಇ) ಅರ್ಜಿದಾರರ ಪರವಾಗಿ ೧,೬೦೭.

ಅರ್ಜಿದಾರರ ವಿರುದ್ಧವಾಗಿ ೩೬೦

## ಮುಳಬಾಗಿಲಿನಲ್ಲಿ ಕೆ: ಎಸ್. ಆರ್. ಟಿ, ಸಿ. ಬಸ್ ನಿಲ್ದಾಣದ ಬಗ್ಗೆ

೧೮೮೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ,

ಆ) ಹಾಗಿದ್ದಲ್ಲಿ ಈ ವಿಭಾಗವನ್ನು ಎಂದು ತೆರೆಯಲಾಗುವುದು,

ಇ) ಮುಳಬಾಗಿಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣವನು ಅಭಿವೃದ್ಧಿಗೊಳಿಸುವುದು ಸರ್ಕಾರದ ಗಮನದಲ್ಲಿದೆಯೇ,

ಈ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಎಂದು ಕಾರ್ಯಾರಂಭ ಮಾಡುವಿರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ)ಇಲ್ಲ.

ಆ) ಉದ್ಭವಿಸುವುದಿಲ್ಲ,

ಇ) ಮುಳಬಾಗಲಿನಲ್ಲಿಯು ಬಸ್ ನಿಲ್ದಾಣವು ಪುರಸಭೆಯ ಅಧೀನದಲ್ಲಿದೆ.

ಈ) ಉದ್ಭವಿಸುವುದಿಲ್ಲ.

## ಖಾಸಗಿ ಬಸ್ಸುಗಳ ರಾಷ್ಟ್ರೀಕರಣ ಮಾಡುವ ಬಗ್ಗೆ

೧೮೯೪ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪೂರ್ಣವಾಗಿ ಖಾಸಗೀ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶ ವಿದೆಯೇ ?

ಆ) ಪೂರ್ಣವಾಗಿ ರಾಷ್ಟ್ರೀಕರಣ ಮಾಡದೆ ಇರಲು ಕಾರಣ ಮತ್ತು ಹೊಂದರೆ ಏನು ?